152ನೇ6 ದಿ:72 - 61 4RR 2905

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ ಕೆ. ರಾಥೋಡ್ ಇವರ ನಿಯಮ – 72 ರಡಿ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಉತ್ತರ.**

**ವಿಷಯ :-**

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯನ್ನು ಕರ್ನಾಟಕ ಜಲಸಾರಿಗೆ ಮಂಡಳಿಯನ್ನಾಗಿ ಪರಿವರ್ತಿಸಿರುವುದರಿಂದ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳಿಗೆ ಸೇವಾ ಜೇಷ್ಠತೆ, ಸೇವಾ ಮುಂಬಡ್ತಿ ಮತ್ತು ಸೇವಾ ಭವಿಷ್ಯಕ್ಕೆ ತೊಂದರೆಯಾಗುತ್ತಿರುವ ಮಹತ್ವವಾದ ವಿಷಯದ ಬಗ್ಗೆ ಮಾನ್ಯ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ :**

ಈ ಹಿಂದಿನ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯನ್ನು ಸರ್ಕಾರದ ಅಧಿಸೂಚನೆ ಕ್ರಮಾಂಕ: ಲೋಇ 111 ಪಿಎಸ್‌ಪಿ 2017, ದಿನಾಂಕ:19.03.2018 ರನ್ವಯ ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ-2015 ನ್ನು ಜಾರಿಗೊಳಿಸಿ ಕರ್ನಾಟಕ ಜಲಸಾರಿಗೆ ಮಂಡಳಿಯಾಗಿ ಪರಿವರ್ತಿಸಲಾಗಿರುತ್ತದೆ. ಕರ್ನಾಟಕ ಜಲಸಾರಿಗೆ ಮಂಡಳಿಯ ಅಧಿನಿಯಮ-2015ರ ನಿಯಮ-19ರನ್ವಯ ಉದ್ದೇಶಿತ ಅಧಿನಿಯಮವು ಜಾರಿಗೆ ಬರುವಂತ ನಿಕಟಪೂರ್ವದಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರತಿಯೊಬ್ಬ ನೌಕರನು ಮಂಡಳಿಯಲ್ಲಿ ವಿಲೀನವಾಗುವ ಅವಕಾಶವನ್ನು ಆಯ್ಕೆ ಮಾಡಿಕೊಳ್ಳದೇ ಇದ್ದಲ್ಲಿ ಅವನು ಸರ್ಕಾರಿ ನೌಕರನಾಗಿ ಮುಂದುವರೆಯಲಿದ್ದು, ಮಂಡಳಿಯ ಸೇವೆಯಲ್ಲಿ ನಿಯೋಜನೆಯ ಮೇಲೆ ಸೇವೆ ಸಲ್ಲಿಸುವವನೆಂದು ಭಾವಿಸತಕ್ಕದ್ದು ಎಂದು ಸ್ಪಷ್ಟವಾಗಿ ನಮೂದಿಸಿದೆ. ಅಂತಹ ಯಾವೊಬ್ಬ ನೌಕರನ ಸೇವಾ ಅವಧಿಯನ್ನು ವೇತನ ಸೌಲಭ್ಯಗಳನ್ನು, ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ನೌಕರನಿಗೆ ಸರ್ಕಾರದ ಪೂರ್ವ ಮಂಜೂರಾತಿಯ ಹೊರತು ಆತನಿಗೆ ಪ್ರತಿಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ ಎಂದು ಅಧಿನಿಯಮದಲ್ಲಿ ನಮೂದಿದೆ. ಅದೇ ಸೇವಾ ಷರತ್ತುಗಳು ಮತ್ತು ನಿಬಂಧನೆಗಳ ಮೇಲೆ ನಿವೃತ್ತಿ ಹೊಂದುವವರೆಗೆ ಮುಂದುವರೆಯಲು ವಿಶೇಷ ಅವಕಾಶವನ್ನು ಅಧಿನಿಯಮದಲ್ಲಿ ನೀಡಲಾಗಿರುತ್ತದೆ.

ಅದಕ್ಕನುಗುಣವಾಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಓರ್ವ ಗ್ರೂಪ್ "ಎ" ಅಧಿಕಾರಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಗ್ರೂಪ್ "ಎ" ದಿಂದ ಗ್ರೂಪ್ "ಡಿ" ನ ಅಧಿಕಾರಿ/ ಸಿಬ್ಬಂದಿಗಳು ಕರ್ನಾಟಕ ಸರ್ಕಾರದ ನೌಕರರಾಗಿ ಮುಂದುವರೆಯಲು ಲಿಖಿತ ಮನವಿಯನ್ನು ನೀಡಿದ್ದು, ಅದನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ:ಲೋಇ 111 ಪಿಎಸ್‌ಪಿ 2017 (ಭಾ-4) ದಿನಾಂಕ: 23.01.2020 ರಲ್ಲಿ ದಿನಾಂಕ:01.04.2020 ರಿಂದ ಜಾರಿಗೆ ಬರುವಂತೆ ಕರ್ನಾಟಕ ಜಲಸಾರಿಗೆ ಮಂಡಳಿಗೆ ನಿಯೋಜಿಸಿ ಆದೇಶಿಸಿದೆ.

ಈ ಹಿಂದೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸರ್ಕಾರದ ಆದೇಶ ಕ್ರಮಾಂಕ:ಡಿಪಿಎಆರ್ 5 ಎಆರ್‌ಬಿ 2020, ದಿನಾಂಕ:15.07.2020 ರಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯನ್ನು ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಲಾಗಿರುತ್ತದೆ.

ಆದುದರಿಂದ ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ನಿಯೋಜನೆಯ ಮೇಲೆ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ವಯ ದೊರೆಯತಕ್ಕ ವೇತನ ಭತ್ಯೆ ಸೌಲಭ್ಯಗಳು, ಪಿಂಚಣಿ ಸೌಲಭ್ಯಗಳು, ಸೇವಾ ಜೇಷ್ಠತೆ, ಮುಂಬಡ್ತಿ ಸೌಲಭ್ಯಗಳು ಹಾಗೂ ಸರ್ಕಾರವು ಸರ್ಕಾರಿ ನೌಕರರಿಗೆ ಕಾಲಕಾಲಕ್ಕೆ ನೀಡುವ ಎಲ್ಲಾ ಸೌಲಭ್ಯಗಳು ದೊರೆಯುತ್ತಿದೆ.

IDD 26 BNS 2024

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಇಲಾಖೆ**